



‘ಸಂಸಾರವೆಂದರೆ’ ಎಂಬ ಹ್ಯಾಶ್‌ಟ್ಯಾಗ್‌ನೊಂದಿಗೆ ಸಂಸಾರದ ಕುರಿತು ವ್ಯಾಖ್ಯಾನಿಸುವ ಸಾಲುಗಳನ್ನು ಬರೆಯುವ ಟ್ರೆಂಡ್ ಈಗ ಕೆಲವು ದಿನಗಳ ಹಿಂದೆ ಫೇಸ್‌ಬುಕ್‌ನಲ್ಲಿ ಚಾಲ್ತಿಯಲ್ಲಿತ್ತು. ಸಂಸಾರದ ಅರ್ಥ–ವಿವರಣೆ ನೀಡಲು ಎಷ್ಟೋ ದಿನಗಳಿಂದ ಕಾದಿದ್ದವರಂತೆ ಫೇಸ್‌ಬುಕ್ಕಿಗರು ಸಾಲು ಸಾಲು ವ್ಯಾಖ್ಯಾನಗಳನ್ನು ನೀಡಿಯೇ ನೀಡಿದರು. ಅದರಲ್ಲಿ ಸುಮಾ ಮಂಜುನಾಥ್ ಅನ್ನುವವರ ವಾಲ್‌ನಲ್ಲಿ ಕಂಡ ಸಾಲುಗಳು ಹೀಗಿವೆ:

ಬೇಕೆಂದಾಗ ಒಂದನೇ ಮಗು ಆಗದೇ ಇರುವುದು

ಬೇಡವೆಂದಾಗ ಎರಡನೇ ಮಗು ಆಗುವುದು.

ಥಟ್ಟನೆ ನಗುವುಕ್ಕಿಸುವ, ಮರುಕ್ಷಣವೇ ‘ಹೌದಲ್ವಾ?’ ಅನಿಸುವ, ತುಸು ಹೊತ್ತು ಬಿಟ್ಟು ಮತ್ತೆ ಮನಸೊಳಗೆ ರಿಂಗಣಿಸಿ ಯೋಚಿಸುವಂತೆ ಮಾಡುವ ಈ ಸಾಲುಗಳು ಈ ಕಾಲದ ಬಹು ಗಂಭೀರವಾದ ವಿದ್ಯಮಾನವೊಂದನ್ನು ತನ್ನ ಹಿಂದೆ ಅಡಗಿಸಿಟ್ಟುಕೊಂಡಿರುವಂತಿವೆ.

ಬಹಳಷ್ಟು ಜನರು ಮದುವೆಯ ಹಂತದಲ್ಲಿಯೇ ‘ಮೊದಲ ಮಗು ಯಾವಾಗ?’ ಎಂದು ಯೋಚಿಸುತ್ತಾರೆ, ಚರ್ಚಿಸಿರುತ್ತಾರೆ. ದಾಂಪತ್ಯದ ಆರಂಭದ ದಿನಗಳಲ್ಲಿಯೇ ಮಗುವನ್ನು ಯಾವಾಗ ಮಾಡಿಕೊಳ್ಳಬೇಕು ಎಂಬ ಬಗ್ಗೆ ಅವರಿಗೆ ಸ್ಪಷ್ಟತೆಯೂ ಎಚ್ಚರಿಕೆಯೂ ಇರುತ್ತದೆ. ಬಹುತೇಕ ಮೊದಲ ಮಗು ಅವರ ಇಚ್ಛೆ–ಹಂಬಲದ ಫಲವಾಗಿಯೇ ಜನಿಸುತ್ತದೆ. ಆದರೆ ಎರಡನೇ ಮಗುವಿನ ವಿಷಯದಲ್ಲಿ ಹಲವರ ಬದುಕಿನಲ್ಲಿ ಹೀಗೆಯೇ ಆಗುವುದಿಲ್ಲ. ‘ಮೊದಲನೇ ಮಗು ಪ್ಲ್ಯಾನ್ ಮಾಡಿದ್ದು. ಆದ್ರೆ ಎರಡನೇ ಮಗು ಅಚಾನಕ್ ಆಗಿಹೋಯ್ತು. ನಾವು ಎಚ್ಚರಿಕೆಯಿಂದ್ಲೇ ಇದ್ವಿ. ಆದ್ರೆ ಆಗಿಹೋಯ್ತು’ ಎಂದು ಹೇಳುವವರು ಸಾಕಷ್ಟಿದ್ದಾರೆ.

‘ನಾವಿಬ್ಬರು ನಮಗಿಬ್ಬರು’, ‘ಆರತಿಗೊಬ್ಬ ಮಗಳು, ಕೀರುತಿಗೊಬ್ಬ ಮಗ’, ‘ಒಂದು ಬೇಕು, ಎರಡು ಸಾಕು’ – ಇವೆಲ್ಲವೂ ಕುಟುಂಬ ಯೋಜನೆಯ ಪ್ರಚಾರಕ್ಕೆ ಬಳಕೆಯಾಗಿರುವ ಜನಪ್ರಿಯ ಘೋಷವಾಕ್ಯಗಳು. ಆದರೆ ಈಗ ಈ ವಾಕ್ಯಗಳ ಹಂತವನ್ನೂ ದಾಟಿ ಸಮಾಜ ಮುಂದಿಡುತ್ತಿದೆ. ‘ಮಕ್ಕಳೇ ಇಲ್ಲದ ಬದುಕು’ ಎಂಬುದು ಒಂದು ಚಳವಳಿಯಾಗಿಯೂ ಪ್ರಚಲಿತಗೊಳ್ಳುತ್ತಿರುವ ಕಾಲವಿದು. ಒಂದು ಆರೋಗ್ಯವಂತ ಮಗು ಇದ್ದರೆ ಸಾಕು. ಎರಡಾದರೆ ಅವರ ಶಿಕ್ಷಣ, ಆರೋಗ್ಯ, ಗೌರವಯುತ ಜೀವನ ಕಟ್ಟಿಕೊಡಲು ಬೇಕಾಗುವ ಅಗತ್ಯಗಳನ್ನು ಕೊಡುವುದು ಕಷ್ಟವಾಗಬಹುದು ಎಂದು ಯೋಚಿಸುವ ದೊಡ್ಡ ಸಮುದಾಯ ಇವೆ. ಗಂಡು–ಹೆಣ್ಣು ಇಬ್ಬರೂ ಉದ್ಯೋಗಕ್ಕೆ